# ತೃತೀಯ ಬಿ.ಎ. ಪದವಿ ಪರೀಕ್ಷೆ

## ಆಗಸ್ಟ್ / ಸೆಪ್ಟೆಂಬರ್ 2011

## ಅಂಚೆ ಮತ್ತು ತೆರಪಿನ ಶಿಕ್ಷಣ

(ಹೊಸಬರಿಗೆ / ಹಳಬರಿಗೆ)

## ಬಸವ ತತ್ವ

**ಪತ್ರಿಕೆ – ೫: ಶರಣರ ಆಂದೋಲನಗಳು ಹಾಗೂ ಹೊಸ ಸಮಾಜದ ಪರಿಕಲ್ಪನೆ**

*ಘಂಟೆ: 3 hrs]* *ಅಂಕಗಳು: 70 / 80*

**ಸೂಚನೆಗಳು:**

1. *30 ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು 70 ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*
2. *20 ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು 80 ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*
3. *ವಿಶೇಷ ಸೂಚನೆ: ಹೊಸಬರು ಡಿ – ವಿಭಾಗದ ಪ್ರಶ್ನೆಯನ್ನು ಕಡ್ಡಾಯವಾಗಿ ಉತ್ತರಿಸಬೇಕು.*

### ವಿಭಾಗ – ಎ

*I.* ಯಾವುದಾದರೂ ಎರಡು ವಚನಗಳನ್ನು ವಿಶ್ಲೇಷಿಸಿ. 2 x 5 = 10

ಅ) ಶೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹಾರನೆಂಬೆನೆ ಕಕ್ಕಯ್ಯನ
ಮಾದಾರನೆಂಬೆನೆ ಚನ್ನಯ್ಯನ?
ಆನು ಹಾರವನೆಂದರೆ ಕೂಡಲ ಸಂಗಯ್ಯ ನಗುವನಯ್ಯ

ಆ) ಜಂಗಮನ ಕರೆತಂದು ಮನೆಯಲ್ಲಿ ಕುಳ್ಳಿರಿಸಿ
ಲಿಂಗದ ಮೇಲಿನ ಜಪನೆಣೆಸುವ ಭಕ್ತನ ಬಾಯಲಿ
ಕೆರವನಿಕ್ಕಲಿ ಅವನ ಲಿಂಗಾರ್ಚನೆಯ ಬಾಯಲ್ಲಿ ಹುಡಿಯ
ಹೊಯ್ಯಲಿ ಜಂಗಮದ ತೃಪ್ತಿಯವರಿಯದೆ ಲಿಂಗವಂತನೆಂತಾಗುವನೋ
ಮರುಳೆ? ಆತ ಪಿಸುಣ ಹೊಲೆಯನೆಂದಾತ ಅಂಬಿಗರ ಚೌಡಯ್ಯ

ಇ) ಪುಣ್ಯಪಾಪವಿಲ್ಲಾಗಿ ಯಮನ ಹಂಗಿಲ್ಲ
ಬಂದುದನುಂಬನಾಗಿ ಮಾನವರ ಹಂಗಿಲ್ಲ
ಭವಗೆಟ್ಟವನಾಗಿ ದೈವದ ಹಂಗಿಲ್ಲ
ಸತ್ಯ ಜ್ಞಾನಾನಂದವೆ ತಾನಾಗಿ ಇನ್ನಾರ ಹಂಗಿಲ್ಲ
ಇನ್ನಾರ ಹಂಗಿಲ್ಲದಾತ ಗುಹೇಶ್ವರಯ್ಯನೊಬ್ಬನೆ

### ವಿಭಾಗ – ಬಿ

*II.* ಯಾವುದಾದರೂ ನಾಲ್ಕಕ್ಕೆ ಉತ್ತರಿಸಿ. 4 x 10 = 40

ಅ) ಆಂದೋಲನಗಳು ಸಾಮಾಜಿಕ ಪರಿವರ್ತನೆ ಮಾಡಿದೆಯೇ? ಉದಾಹರಣೆಯೊಂದಿಗೆ ವಿವರಿಸಿ.

ಆ) ಶರಣರ ಆಂದೋಲನದ ಪೂರ್ವಸ್ಥಿತಿಯ ಬಗ್ಗೆ ವಿವರಿಸಿ.

*Contd... 2*

61

ಇ) ಯಜ್ಞಗಳ ಬಗ್ಗೆ ಶರಣರು ಹೇಗೆ ಪ್ರತಿಭಟಿಸಿದ್ದಾರೆ? ವಚನಗಳ ಸಹಿತ ವಿವರಿಸಿ.

ಈ) ವಚನಕಾರರ ಹೊಲೆಯ ಯಾರು? ವಿವರಿಸಿ.

ಉ) ಬಸವಣ್ಣನ ಕಾಲದ ಸ್ತ್ರೀ, ಇಂದಿನ ಆದರ್ಶ ಮಹಿಳೆಯೇ? ವಿಶ್ಲೇಷಿಸಿ.

## ವಿಭಾಗ – ಸಿ

***III.* ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** 4 x 5 = 20

ಅ) ಬುದ್ಧನ ಆಂದೋಲನ.

ಆ) ಮೂಢನಂಬಿಕೆಗಳು ಮತ್ತು ಶಿವಶರಣರು

ಇ) ಗುರು – ಶಿಷ್ಯರ ಸಂಬಂಧ.

ಈ) ಲಿಂಗ ಪೂಜೆಯ ಮಹತ್ವ.

ಉ) ಕಾಯಕ ಪ್ರಜ್ಞೆ

## ವಿಭಾಗ – ಡಿ

***ವಿಶೇಷ ಸೂಚನೆ: ಹೊಸಬರು ಈ ಪ್ರಶ್ನೆಯನ್ನು ಕಡ್ಡಾಯವಾಗಿ ಉತ್ತರಿಸಬೇಕು.*** 1 x 10 = 10

ಅ) ಬಸವಣ್ಣನವರ ಕಾಲದ ಮಹಿಳಾ ವಚನಕಾರರನ್ನು ಅವರ ವಚನಗಳೊಂದಿಗೆ ವಿವರಿಸಿ.

* * * * * * *